4. ಪುತ್ತೂರು ಮಾರುಕಟ್ಟೆ ಪ್ರಾಂಗಣ :

1. ಅರುಣಾ ಟಾಕೀಸ್‌ನಿಂದ ಪುತ್ತೂರು ಉಪ ಮಾರುಕಟ್ಟೆ ಪ್ರಾಂಗಣದ ಕೂಡು ರಸ್ತೆಗೆ 150 ಮೀಟರ್ ಉದ್ದದ ಚರಂಡಿ ನಿರ್ಮಾಣ.
2. ಅಗ್ನಿಶಾಮಕ ವಾಹನದ ನಿಲುಗಡೆಗೆ ಎರಡು ತಾತ್ಕಾಲಿಕ ಶೆಡ್ ನಿರ್ಮಾಣ.
3. ಒಳರಸ್ತೆಗಳ ನಿರ್ಮಾಣ ಹಾಗೂ ಎನ್.ಜಿ.ಆರ್.ಜಿ. ಗೋದಾಮುಗಳ ಮುಂಭಾಗದ ರಸ್ತೆ ದುರಸ್ತೀಕರಣ.
4. ನೆಲ ಮಾಳಿಗೆಗಳನ್ನು ಗೋದಾಮುಗಳನ್ನಾಗಿ ಪರಿವರ್ತಿಸುವುದು.
5. ಎನ್.ಜಿ.ಆರ್.ಜಿ. ಗೋದಾಮುಗಳ ಮುಂದಿನ ರಸ್ತೆಗಳ ಡಾಂಬರೀಕರಣ.
6. ಹೊಸದಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನನ್ನು ಸಮತಟ್ಟು ಮಾಡುವುದು.

5. ಸುಳ್ಯ ಉಪ ಮಾರುಕಟ್ಟೆ ಪ್ರಾಂಗಣ :

1. ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಒಳರಸ್ತೆ ಮತ್ತು ಚರಂಡಿ ನಿರ್ಮಾಣ.

ವಿಷಯ : ರಾಯಚೂರು ಜಿಲ್ಲೆಯಲ್ಲಿ ನೆರೆ ಹಾವಳಿಗೆ ಪರಿಹಾರ.

Q: 361

ಶ್ರೀ ಜಿ. ಹಂಪನಗೌಡ (ಸಿಂಧನೂರು) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆಯ ನೆರೆ ಹಾವಳಿಗೆ ಸರ್ಕಾರ ಎಷ್ಟು ಪರಿಹಾರ ಧನ ಬಿಡುಗಡೆ ಮಾಡಿದೆ?

ಆ) ನೆರೆ ಹಾವಳಿಯಿಂದ ಪೂರ್ಣ ಬಿದ್ದ ಮನೆಗಳು ಎಷ್ಟು ಮತ್ತು ಭಾಗಶಃ ಬಿದ್ದ ಮನೆಗಳು ಎಷ್ಟು?

ಇ) ಸರ್ವೆ ಮಾಡುವಾಗ ಅಥವಾ ಪರಿಹಾರ ಧನ ವಿತರಣೆ ಮಾಡುವಾಗ ಬಿಟ್ಟ ಮನೆಗಳ ಸಂಖ್ಯೆ ಎಷ್ಟು?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು) :

ಅ) ರಾಯಚೂರು ಜಿಲ್ಲೆಗೆ ನೆರೆ ಹಾವಳಿ ಪರಿಹಾರ ಕಾರ್ಯಗಳಿಗೆ 1,590.55 ಲಕ್ಷ ರೂ. ಗಳನ್ನು ಬಿಡುಗಡೆ ಮಾಡಿದೆ.

ಆ) ನೆರೆ ಹಾವಳಿಯಿಂದ ಹಾನಿಗೊಳಗಾದ ಮನೆಗಳ ವಿವರ ಈ ಕೆಳಕಂಡಂತಿದೆ-

ಪೂರ್ಣವಾಗಿ ಬಿದ್ದ ಮನೆಗಳ ಸಂಖ್ಯೆ	-	12,947
ಭಾಗಶಃ ಬಿದ್ದ ಮನೆಗಳ ಸಂಖ್ಯೆ	-	76,380
ಒಟ್ಟು	-	89,327

ಇ) ಪರಿಹಾರ ಧನ ವಿತರಣೆ ಮಾಡುವಾಗ ಕೆಲವು ಪ್ರಕರಣಗಳು ಬಿಟ್ಟು ಹೋಗಿರುವ ಬಗ್ಗೆ,

ಮನವಿ ಬಂದಿರುತ್ತದೆ. ಇದರ ಸತ್ಯತೆ ಪರಿಶೀಲಿಸಿ ಅರ್ಹ ಪ್ರಕರಣಗಳಲ್ಲಿ ಪರಿಹಾರ ನೀಡಲು ಕಂದಾಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿರುತ್ತದೆ.

ವಿಷಯ : ಕುಡಿಯುವ ನೀರಿನ ತಾಂತ್ರಿಕ ಯೋಜನೆಯ ಅಡಿಯಲ್ಲಿ ರಾಯಚೂರು ಜಿಲ್ಲೆಗೆ ಮಂಜೂರಾದ ಹಣ.

Q: 362

ಶ್ರೀ ಡಿ. ಹಂಪನಗೌಡ (ಸಿಂಧನೂರು) : ಮಾನ್ಯ ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶುದ್ಧ ಕುಡಿಯುವ ನೀರಿನ ತಾಂತ್ರಿಕ ಯೋಜನೆಯ ಅಡಿಯಲ್ಲಿ ರಾಯಚೂರು ಜಿಲ್ಲೆಗೆ ಮಂಜೂರಾದ ಹಣವೆಷ್ಟು?

ಆ) ಜಿಲ್ಲೆಯಲ್ಲಿ ಈ ಯೋಜನೆ ಅಡಿಯಲ್ಲಿ ಮಂಜೂರು ಮಾಡಿದ ಕುಡಿಯುವ ನೀರಿನ ಯೋಜನೆಗಳೆಷ್ಟು ಹಾಗೂ ಈ ಯೋಜನೆಗಳು ಯಾವ ಹಂತದಲ್ಲಿದೆ (ತಾಲ್ಲೂಕುವಾರು ಮಾಹಿತಿ ನೀಡುವುದು)

ಇ) ಈ ಯೋಜನೆಗಳು ಮುಗಿಯಬೇಕಾದರೆ ಬೇಕಾಗುವ ಹಣವೆಷ್ಟು?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) :

ಅ) ರೂ. 400.00 ಲಕ್ಷಗಳು.

ಆ) 151 ಯೋಜನೆಗಳು.
ತಾಲ್ಲೂಕುವಾರು ಯೋಜನೆಯ ಹಾಲಿ ಸ್ಥಿತಿಯನ್ನು ಕೆಳಗೆ ಕೊಡಲಾಗಿದೆ.

ಕ್ರಮ ಸಂಖ್ಯೆ	ತಾಲ್ಲೂಕು	ಒಟ್ಟು ಯೋಜನೆಗಳ ಸಂಖ್ಯೆ	ಕಾರ್ಯಗತವಾದ ಯೋಜನೆಗಳ ಸಂಖ್ಯೆ	ಚಾಲ್ತಿಯಲ್ಲಿ -ರುವ ಯೋಜನೆ -ಗಳ ಸಂಖ್ಯೆ
1.	ರಾಯಚೂರು	11	6	2
2.	ಮಾನ್ವಿ	21	14	3
3.	ದೇವದುರ್ಗ	30	15	16
4.	ಲಿಂಗಸುಗೂರು	12	6	5
5.	ಸಿಂಧನೂರು	37	19	12
6.	ಕೊಪ್ಪಳ	7	7	-
7.	ಕುಷ್ಟಗಿ	18	9	9
8.	ಗಂಗಾವತಿ	10	5	5
9.	ಯಲಬುರ್ಗ	5	4	1
	ಒಟ್ಟು	151	85	52